

## ಗಿನ್ನೆಸ್ ದಾಖಲೆಯತ್ತ ವಿಕ್ರಮನ ಐಸ್ ಹುಚ್ಚು

# ಐಸ್ ಮೇಲೆ 2 ತಾಸು!

ಈ ಹುಡುಗ ಗ್ರೀನ್‌ಲ್ಯಾಂಡ್, ಫಿನ್ಲೆಂಡ್ ಇಲ್ಲವೇ ನಾರ್ವೆಯಲ್ಲಿ ಹುಟ್ಟಿದ್ದರೆ ಚಳಿಗಾಲದ ಸ್ನೋಫಾಲ್‌ನಲ್ಲೂ ಸಲ್ಮಾನ್ ಖಾನ್‌ನ ಹಾಗೆ ಟಾಪ್‌ಲೆಸ್ ಆಗಿ ಊರು ಸುತ್ತಬಹುದಿತ್ತು.

ಚಳಿ ಒಂಚೂರೂ ಮೈಗೇ ತಾಗಲ್ಲ ಅಂತಾನೆ! ಹಿಮಾಲಯಕ್ಕೆ ಟ್ರೆಕಿಂಗ್ ಹೋದೋರು ಕಾಲು ಜಾರಿ ಐಸ್ ಕಂದರಕ್ಕೆ ಬಿದ್ದು ಸತ್ತೇ ಹೋಗುತ್ತಾರೆ. ಸೂಕ್ತ ಉಡುಪುಗಳಿಲ್ಲದೆ ಕಾಶ್ಮೀರ, ಉತ್ತರ ಪ್ರದೇಶದಲ್ಲಿ ಜನ ಚಳಿಗೆ ಸೆಟೆದು ಹೋಗುತ್ತಾರೆ. ಅಷ್ಟೇ ಏಕೆ ಬೆಂಗಳೂರಿನ ಚಳಿಗೆ ಉಲ್ಲನ್ ಜಾಕೆಟ್ ಇಲ್ಲದಿದ್ದರೆ ನಡುಗಿ ಹೋಗುತ್ತಾರೆ.

ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ಲೋಕಾಪುರ ಎಂಬ 'ಸಿಮೆಂಟ್ ನಗರಿ'ಯ ಹುಡುಗ ವಿಕ್ರಮ ಅಡವಯ್ಯ ನಂದಯ್ಯಗೋಳ್ ಮೈಮೇಲೆಲ್ಲ ಐಸ್ ಹೊದ್ದು ತಾಸುಗಟ್ಟಲೆ ಮಲಗುತ್ತಾನೆ!

ತಲೆ ಕೆಟ್ಟಿದೆಯಾ? ಅಂದುಕೊಳ್ಳುವುದು ಸಹಜ.

ಆದರೆ ಈತ ಗಿನ್ನೆಸ್ ದಾಖಲೆಗಾಗಿ ಇದನ್ನೆಲ್ಲ ಮಾಡುತ್ತಾನೆ ಅಂದರೆ?

ಚೀನಾದ ವ್ಯಕ್ತಿಯೊಬ್ಬ ಸತತ 108 ನಿಮಿಷಗಳ ಕಾಲ ಐಸ್ ಗಡ್ಡೆಗಳ ಮೇಲೆ ಮಲಗಿ ದಾಖಲೆ ನಿರ್ಮಿಸಿದ ಸುದ್ದಿ ಹಳೆಯದು. ಈ ದಾಖಲೆಯನ್ನು ಮುರಿದ ಸಾಧನೆ ವಿಕ್ರಮನದು. ಅಂದರೆ ಈತ ಸತತ 120 ನಿಮಿಷಗಳ ಕಾಲ ಐಸ್ ಗಡ್ಡೆಗಳ ಮೇಲೆ ವಿರಾಜಮಾನನಾಗಬಲ್ಲ. ಹಾಗೆ ಮಾಡಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದು ಸುಳ್ಳಲ್ಲ. ಇತ್ತೀಚೆಗೆ ನಾಡಿನ ಟಿವಿ ಚಾನೆಲ್‌ನಲ್ಲಿ ಈತನ ಸಾಹಸದ ನೇರ ಪ್ರಸಾರ ನಡೆದಿದೆ. ಈ ಬಗ್ಗೆ ಒಂದು ತಾಸಿನ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಟ್ಟಿದೆ.

ಯಾಕಯ್ಯ ಈ ಐಸ್ ಸಹವಾಸ? ಎಂದು ಕೇಳಿದೆ.

'ಸರ್, ಏನಾದರೂ ಸಾಧನೆ ಮಾಡಬೇಕು. ಹೆತ್ತವರ, ಹುಟ್ಟಿ ಬೆಳೆದ ಊರು, ನಾಡಿನ ಹೆಸರು ಬೆಳಗಿಸಲು ಏನಾದರೂ ಮಾಡಲೇಬೇಕೆಂಬ ಹಟ ಇತ್ತು. ಅದಕ್ಕೊಂದು ದಾರಿ ಹುಡುಕುತ್ತಿದ್ದೆ ಇದು ಕಾಣಿಸಿತು' ಎನ್ನುತ್ತಾನೆ.

ಅದು ಹೇಗೆ?

'ನಾನು ಆಗಾಗ ಐಸ್ ಫ್ಯಾಕ್ಟರಿಗೆ ಹೋಗುತ್ತಿದ್ದೆ. ಐಸ್ ಗಡ್ಡೆಗಳನ್ನು ನೋಡುತ್ತಿದ್ದೆ, ಮುಟ್ಟುತ್ತಿದ್ದೆ, ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದೆ. ಅಂಥ ತಣ್ಣಗಿನ ಅನುಭವ ನನಗಾಗುತ್ತಲೇ ಇರಲಿಲ್ಲ. ಅಲ್ಲದೇ ಚೀನಾದಲ್ಲಿ ಒಬ್ಬ ವ್ಯಕ್ತಿ 108 ನಿಮಿಷಗಳ ಕಾಲ ಐಸ್ ಗಡ್ಡೆಗಳ ಮೇಲೆ ಮಲಗಿ ಸುದ್ದಿ ಮಾಡಿದ್ದನ್ನು ಕೇಳಿದ್ದೆ. ತಟ್ಟನೆ ನನಗೂ ಅಂಥ ಸಾಹಸ ಯಾಕೆ ಮಾಡಬಾರದು ಅನಿಸಿತು. ನಿತ್ಯ ಐಸ್ ಗಡ್ಡೆಗಳನ್ನು ಸುರುವಿಕೊಂಡು ಅದರ ಮೇಲೆ ಅಭ್ಯಾಸ ಶುರು ಮಾಡಿಬಿಟ್ಟೆ. ಎರಡೇ ವರ್ಷದೊಳಗೆ ಚೀನಾ ವ್ಯಕ್ತಿಯ ದಾಖಲೆ ಮುರಿಯುವ ಸಂಕಲ್ಪ ಮಾಡಿಬಿಟ್ಟೆ. ಅದನ್ನು ಸಾಧಿಸಿದೆ. ಈಗೇನಿದ್ದರೂ ಗಿನ್ನೆಸ್ ದಾಖಲೆ ಪುಸ್ತಕ ಸೇರುವಾಸೆ. ಕೈಯಲ್ಲಿ ಹಣವಿಲ್ಲ ಏನು ಮಾಡಲಿ?' ಎಂದು ಆತ ಸಪ್ಪೆ ಮಾರಿ ಮಾಡಿಕೊಂಡು ನಿಲ್ಲುತ್ತಾನೆ.

ಅಲ್ಲಯ್ಯಾ ಇದಕ್ಕೆಲ್ಲ ಏನು ಪ್ರೇರಣೆ?

'ಬಡತನ ಸರ್. ಕಿತ್ತು ತಿನ್ನುವ ಬಡತನ. ಹಸಿವನ್ನು ಮರೆಯಲು ನನಗೊಂದು ದೊಡ್ಡದಾದ ಹುಮ್ಮಸ್ಸು ಬೇಕು. ಅದಕ್ಕೇ ಇದೆಲ್ಲ....' ಎಂದಾಗ ವಿಕ್ರಮನ ಕಣ್ಣು ಬಿಸಿಲಿಗೆ ಕರಗುತ್ತಿರುವ ಐಸ್ ಅನಿಸತೊಡಗಿತು.

ವಿಕ್ರಮನ ಗಿನ್ನೆಸ್ ದಾಖಲೆ ಕನಸಿಗೆ ನಿಜಕ್ಕೂ ಆರ್ಥಿಕ ಸಹಾಯ, ಪ್ರೋತ್ಸಾಹದ ಅಗತ್ಯವಿದೆ.

**ಪ್ರೋತ್ಸಾಹಕ್ಕೆ ಸಂಪರ್ಕಿಸಿ:** ವಿಕ್ರಮ ಅಡವಯ್ಯ ನಂದಯ್ಯಗೋಳ್, ಸುಭಾಷ್ ನಗರ, ಲೋಕಾಪುರ- 587122, ತಾಲ್ಲೂಕು: ಮುಧೋಳ, ಜಿಲ್ಲೆ: ಬಾಗಲಕೋಟೆ. ದೂರವಾಣಿ: 8050664860/9686167679 ಎಸ್‌ಬಿಐ ಬ್ಯಾಂಕ್ ಖಾತೆ ನಂಬರ್: 20102207365

■ ದಿಲ್